INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
PageNo,01-12
Peer -Reviewed, Refereed Journal

# ಕೋಡಿಡ್–19 ಸಂದರ್ಭದಲ್ಲಿ ಸಾಂಪ್ರದಾಯಿಕ ಔಷಧಿಗಳ ಪ್ರಭಾವ ಕುರಿತು ಒಂದು ಸಮಾಜಶಾಸ್ತ್ರೀಯ ಅವಲೋಕನ

ಭಾಗ್ಯಲಕ್ಷ್ಮಿ ಜಿ.[1]

**ಪೀಠಿಕೆ**

ಕೋವಿಡ್–19 ರ ಸಾಂಕ್ರಾಮಿಕವು ಜಾಗತಿಕ ಆರೋಗ್ಯ ಬಿಕ್ಕಟ್ಟನ್ನು ಸೃಷ್ಟಿಸಿ, ಇದು ಸಾರ್ವಜನಿಕ ಆರೋಗ್ಯವನ್ನು ತುರ್ತು ಪರಿಸ್ಥಿತಿಗೆ ತಂದೊಡ್ಡಿದೆ. 2019 ರಲ್ಲಿ ಪ್ರಾರಂಭವಾದ ಕೋವಿಡ್–19 ನಿಂದ ಪ್ರಪಂಚದಾದ್ಯಂತ ಪ್ರತಿದಿನ ಸೋಂಕಿಗೆ ಒಳಗಾದವರ ಸಂಖ್ಯೆ ಮತ್ತು ಸಾವಿನ ಸಂಖ್ಯೆ ಹೆಚ್ಚಾಗುತ್ತಿತ್ತು. ಈ ಸಂದರ್ಭದಲ್ಲಿ ವೈರಸ್ಗೆ ಲಸಿಕೆ ಇಲ್ಲದ ಕಾರಣ ಇದರ ಪರಿಹಾರಕ್ಕಾಗಿ, ಪರಿಣಾಮಕಾರಿ ಸಾಂಪ್ರದಾಯಿಕ ಔಷಧಿಗಳನ್ನು ಬಳಸಲು ಪ್ರಯತ್ನಿಸಿದರು. ಸಾಂಪ್ರದಾಯಿಕ ಔಷಧಿಗಳಾದ ಗಿಡಮೂಲಿಕೆಗಳು, ಸಸ್ಯಗಳು ಮತ್ತು ಪ್ರಾಣಿಗಳ ಸಾರದಿಂದ ಮಾಡುವ ಔಷಧಿಯಾಗಿದೆ. ಪ್ರಾಚೀನ ಕಾಲದಿಂದ ಪ್ರಸ್ತುತ ಅನೇಕ ರೋಗಗಳಿಗೆ ಜನರು ಒಂದಲ್ಲ ಒಂದು ರೀತಿಯಾಗಿ ಪ್ರಪಂಚದ ಎಲ್ಲಾ ಕಡೆಯೂ ಈ ಸಾಂಪ್ರದಾಯಿಕ ಔಷಧಿಯನ್ನು ಬಳಸುತ್ತಿದ್ದಾರೆ.

ಕೋವಿಡ್–19 ಎಂಬ ಸಾಂಕ್ರಾಮಿಕ ರೋಗದ ಲಕ್ಷಣಗಳನ್ನು ತಡೆಗಟ್ಟುವ ಸಲುವಾಗಿ ಈ ಔಷಧಿ ಬಳಸಲಾಯಿತು, ಈ ಸಂದರ್ಭದಲ್ಲಿ ಸಾಂಪ್ರದಾಯಿಕ ಔಷಧಿಗಳಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದ್ದು ಮನೆ ಮದ್ದು, ಆಯುರ್ವೇದ ಮತ್ತು ಯೋಗ. "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ" (**MoHFW**) ಮಾರ್ಗದರ್ಶನದಲ್ಲಿ ಒದಗಿಸಲಾದ ವೈರಸ್ಸನ್ನು ತಡೆಗಟ್ಟುವ ಕ್ರಮಗಳನ್ನು ಹೆಚ್ಚಿಸುವಲ್ಲಿ ಆಯುರ್ವೇದ ಮತ್ತು ಯೋಗ ಪ್ರಮುಖ ಪಾತ್ರ ವಹಿಸಿತು. **MoHFW**, ಜನರು ಕೋವಿಡ್–19 ಅನ್ನು ತಡೆಗಟ್ಟಲು ಮತ್ತು ರೋಗ ಹರಡದಂತೆ ನಿವಾರಿಸಲು ಪ್ರಸ್ತುತತೆಯ ಕೋವಿಡ್–19 ನ ಬಗ್ಗೆ, ತಿಳಿಯುವುದು ಅಗತ್ಯ ಎಂದು ಸೂಚಿಸಿದೆ. ಈ ಕಾರಣದಿಂದಾಗಿ ಸಾಂಪ್ರದಾಯಿಕ ಔಷಧಿಗಳ ಅಧ್ಯಯನವು ಮುಖ್ಯವಾಗಿದೆ.

---

**[1].ಸಂಶೋಧನಾ ವಿದ್ಯಾರ್ಥಿನಿ,ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ,ಬೆಂಗಳೂರು.**

**ಭಾರತದಲ್ಲಿ ಸಾಂಪ್ರದಾಯಿಕ ಔಷಧಿಯ ಐತಿಹಾಸಿಕ ಹಿನ್ನಲೆ:–**

ಭಾರತ ದೇಶದ ಇತಿಹಾಸವು ಬಹುದೀರ್ಘಕಾಲಿನ ಇತಿಹಾಸವಾಗಿದ್ದು, ಸುಮಾರು ಐದು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ನಮ್ಮ ದೇಶವು ಸಾಂಪ್ರದಾಯಿಕತೆಗೆ ಹೆಚ್ಚು ಹೆಸರುವಾಸಿಯಾಗಿದೆ. ನಮ್ಮ ದೇಶವು ಸಂಪದ್ಭರಿತವಾದ ಸಂಪನ್ಮೂಲಗಳಿಂದ ಕೂಡಿದ್ದು, ಸುಮಾರು 50 ಸಾವಿರಕ್ಕಿಂತಲೂ ಹೆಚ್ಚು ಗಿಡಮೂಲಿಕೆಗಳನ್ನು ಔಷಧಿ ಸಸ್ಯಗಳನ್ನು ಒಳಗೊಂಡಿದೆ, ಪ್ರಾಚೀನ ಕಾಲದ ವೇದಗಳಲ್ಲಿಯೂ ನಾವು ಸಾಂಪ್ರದಾಯಿಕ ಔಷಧಿಗಳ ಬಗ್ಗೆ ಮಾಹಿತಿ ಇರುವುದನ್ನು ಕಾಣಬಹುದಾಗಿದೆ. ಆದಿಮಾನವನಾಗಿ ಜೀವನವನ್ನು ಪ್ರಾರಂಭ ಮಾಡಿದ ಮಾನವನು ಕಾಡುಗಳಲ್ಲಿ, ಬೆಟ್ಟಗಳಲ್ಲಿ, ಬಯಲು ಪ್ರದೇಶಗಳಲ್ಲಿ, ಮರಗಳಲ್ಲಿ ವಾಸಮಾಡುತ್ತಾ ಅಲೆಮಾರಿಯಾಗಿ ಜೀವನವನ್ನು ನಡೆಸುತ್ತಿದ್ದನು. ಈ ಸಮಯದಲ್ಲಿ ಈತನ ಮುಖ್ಯ ಉದ್ದೇಶ ಕೇವಲ ಆಹಾರ ಸಂಗ್ರಹಣೆ ಮಾಡುವುದು ಅಷ್ಟೇ ಆಗಿತ್ತು. ಮಾನವನ ಬೌದ್ಧಿಕಮಟ್ಟ ಬೆಳೆಯುತ್ತಿದ್ದಂತೆ ಮಾನವನು ಒಂದು ಕಡೆ ನೆಲೆ ನಿಂತು ವಾಸಿಸಲು ಮುಂದಾದನು. ಆ ಸಮಯದಲ್ಲಿ ಮಾನವನು ಆಹಾರಕ್ಕಾಗಿ ಬೇಟೆಯಾಡುವ ಸಮಯದಲ್ಲಿ ಪ್ರಾಣಿಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವಂತಹ ಕಲೆಯನ್ನು ಕರಗತ ಮಾಡಿಕೊಳ್ಳುತಾ, ಅನೇಕ ಬೇಟೆ ತಂತ್ರಗಳನ್ನು ಕಲಿತನು. ಕ್ರಮೇಣ ಆರೋಗ್ಯದ ಅರಿವು ಮೂಡಿಸಿಕೊಂಡ ಮಾನವ ಬೇಟೆಯಾಡುವ ಸಂದರ್ಭಲ್ಲಿ ತನಗಾದ ಗಾಯಗಳು, ಹಾಗೆಯೇ ಸಣ್ಣ ಪುಟ್ಟ ರೋಗಗಳ ನಿವಾರಣೆಗೆ ಮದ್ದು ಕಂಡುಹಿಡಿಯಲು ಪ್ರಾರಂಬಿಸಿದನು. ಈ ಸಮಯದಲ್ಲಿ ಮಾನವನು ಕಾಡಿನಲ್ಲಿ ವಾಸ ಮಾಡುತ್ತಿದ್ದ ಕಾರಣ ಸಸ್ಯಸಂಪನ್ಮೂಲಗಳಿಗೆ ಯಾವ ಕೊರತೆಯೂ ಇರಲಿಲ್ಲ. ಗಿಡಮೂಲಿಕೆಗಳಿಂದ, ಸಸ್ಯಗಳಿಂದ, ಪ್ರಾಣಿಗಳಿಂದ, ಲಭ್ಯವಾಗುವ ನೈಸರ್ಗಿಕ ಮದ್ದನ್ನು ಔಷಧಿಯನ್ನಾಗಿ ಪರಿವರ್ತಿಸಿ ಬಳಸಲು ಮುಂದಾದನು. ಈ ಔಷಧೀಯ ಬಳಕೆಯನ್ನು ಜನರು ಒಂದು ತಲೆಮಾರಿನಿಂದ–ಮತ್ತೊಂದು ತಲೆಮಾರಿಗೆ ಕಲಿಸುತ್ತಾ ಬಳಕೆ ಮಾಡುತ್ತಾ ಬಂದರು. ಮುಂದೆ ಇದು ಜಾನಪದ ಔಷಧಿ ಅಥವಾ ಸಾಂಪ್ರದಾಯಿಕ ಔಷಧಿ ಎಂಬ ಹೆಸರನ್ನು ಪಡೆದುಕೊಂಡಿದೆ. ಪ್ರಸ್ತುತ ದಿನಗಳಲ್ಲಿ ಇಂದಿಗೂ ಬುಡಕಟ್ಟು ಜನರು ಹೆಚ್ಚಾಗಿ ಸಾಂಪ್ರದಾಯಿಕ ಔಷಧಿಗಳನ್ನು ಬಳಸುತ್ತಿದ್ದಾರೆ, ಈಜಿಪ್ಟ್ ನಾಗರಿಕತೆಯಿಂದ ಪ್ರಾರಂಭವಾದ ಜಾನಪದ ವೈದ್ಯ ಭಾರತದಲ್ಲಿ ಒಂದನೇ ಶತಮಾನದಲ್ಲಿ ಗಿಡಮೂಲಿಕೆಗಳ ಬಳಕೆ ನಡೆದಿತ್ತು ಎಂದು ಚರಕ ಸಂಹಿತೆಯಲ್ಲಿ ಮಾಹಿತಿ ಇರುವುದನ್ನು ನಾವು ಕಾಣಬಹುದಾಗಿದೆ.

**ಔಷಧಿ ಎಂದರೆ:–** ಒಂದು ನಿರ್ದಿಷ್ಟ ರೋಗಕ್ಕೆ ಅಥವಾ ಗಾಯಕ್ಕೆ ನಿರ್ದಿಷ್ಟ ರೂಪದಲ್ಲಿ ನೀಡುವ ಮದ್ದು.

**ಸಾಂಪ್ರದಾಯಿಕ ಔಷಧಿ ಎಂದರೆ:–** ನೈಸರ್ಗಿಕವಾಗಿ ಲಭ್ಯವಿರುವ ಗಿಡಮೂಲಿಕೆಗಳನ್ನು ಬಳಸಿಕೊಂಡು ಪ್ರಾಥಮಿಕವಾಗಿ ನೀಡುವ ಔಷಧಿಯಾಗಿದೆ.

**ಸಾಂಪ್ರದಾಯಿಕ ಔಷಧಿಗಳೆಂದರೆ:–**ಆಯುರ್ವೇದ, ಸಿದ್ಧಿಔಷಧಿ, ಯುನಾನಿ, ಯೋಗ, ಹೋಮಿಯೋಪತಿ, ಯುರೋಪಿಯನ್ ಔಷಧಿ, ಚೀನಿ ಔಷಧಿ, ಸಾಂಪ್ರದಾಯಿಕ ಆಫ್ರಿಕಾ ಔಷಧಿಗಳು.

**ಆಯುಷ್ (AYUSH)**

ಸಾಂಪ್ರದಾಯಿಕ ಔಷಧಿಗಳಿಗೆ ಅವುಗಳದೇ ಆದ ಇತಿಹಾಸವಿದೆ. ಆದರೆ ಅವುಗಳಿಗೆ ಔಷಧಿ ಅಧ್ಯಯನಗಳು, ಕ್ಲಿನಿಕ್ ಪ್ರಯೋಗಾಲಯಗಳು, ಸಂಶೋಧನಾ ಸಹಾಯಧನ ಇಲ್ಲದೆ ಕಳಪೆಯಾಗಿದೆ ಔಷಧಿ ಎಂಬ ಟೀಕೆಗಳು ಕೇಳಿ ಬರುತ್ತಿದ್ದವು. ಈ ಎಲ್ಲಾ ಟೀಕೆಗಳನ್ನು ಸರಿ ಮಾಡಲು ಭಾರತ ಸರ್ಕಾರವು ಆಯುಷ್ ಸಚಿವಾಲಯವನ್ನು ಪ್ರಾರಂಭ ಮಾಡಿತು. 9ನೇ ಪಂಚವಾರ್ಷಿಕ ಯೋಜನೆಯು ಔಷಧಿಯೊಂದಿಗೆ ಏಕೀಕರಣವನ್ನು ಖಾತ್ರಿಪಡಿಸಿ ಆಯುಷ್ಯ ವ್ಯವಸ್ಥೆಯ ವಿವಿಧ ಅಂಶಗಳನ್ನು ನಿಭಾಯಿಸಲು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಂರಕ್ಷಣೆಯಲ್ಲಿ ಹೂಡಿಕೆ ಮಾಡುವುದರಿಂದ ಹಿಡಿದು ಒಟ್ಟಾರೆ ಅಭಿವೃದ್ಧಿಯತ್ತ ಗಮನ ಹರಿಸಿತು. 2003 ರಲ್ಲಿ ಮರುನಾಮಕರಣ ಮಾಡಲಾಯಿತು. ಭಾರತೀಯ ಜನತಾ ಪಕ್ಷವು ಅಧಿಕಾರದಲ್ಲಿದ್ದಾಗ 2004 ರಲ್ಲಿ "ಆಯುಷ್ಯ ಆರೋಗ್ಯ ರಕ್ಷಣೆ" ಕಡೆಗೆ ಗಮನವನ್ನು ಹರಿಸಿತು. ನವೆಂಬರ್ 2014 ರಲ್ಲಿ ಆಯುಷ್ ಸಚಿವಾಲಯವು ಹೊರಹೊಮ್ಮಿದ್ದು ಇದು ಗ್ರಾಮೀಣ ಜನರನ್ನು ಗುರಿಯಾಗಿಸಿಕೊಂಡಿದೆ.

**ಆಯುಷ್ ಉದ್ದೇಶ:–** ಭಾರತದಲ್ಲಿ ಸ್ಥಳೀಯ ಪರ್ಯಾಯ ಔಷಧಿ ವ್ಯವಸ್ಥೆಗಳ ಶಿಕ್ಷಣ ಸಂಶೋಧನೆ ಮತ್ತು ಪ್ರಸರಣವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದೆ.

ಆಯುಷ್ ಸಚಿವಾಲಯದ ಪ್ರಸ್ತುತ ಉಸ್ತುವಾರಿ–**Vidya Rajesh kotecha**

**ಆಯುಷ್ ನವೆಂಬರ್ 9 2014 ಜಾರಿಗೆ ಬಂತು, ಆಯುಷ್ ಪದದ ಅರ್ಥ ವಿವರಣೆ:**

**A–ಆಯುರ್ವೇದ**

**Y–ಯೋಗ**

**U–ಯುನಾನಿ**

**S–ಸಿದ್ಧಿ ಔಷಧಿ**

**H–ಹೋಮಿಯೋಪತಿ**

*** ಆಯುರ್ವೇದ:–**

ಋಗ್ವೇದದಲ್ಲಿ ಆಯುರ್ವೇದದ ಬಗ್ಗೆ ತಿಳಿಸಲಾಗಿದೆ, ಸುಮಾರು ಕ್ರಿ.ಪೂ 800 ರಿಂದಲೂ ಆಯುರ್ವೇದವನ್ನು ನಾವು ಕಾಣಬಹುದಾಗಿದೆ. ಈ ವಿದ್ಯೆಯ ಪಿತಾಮಹ "ಧನ್ವಂತರಿ". ಆದ್ದರಿಂದ ಇದನ್ನು 'ಧನ್ವಂತರಿ ವಿದ್ಯೆ' ಎಂದು ಸಹ ಕರೆಯುತ್ತಾರೆ.

**ಇದರ ಮೂಲ ಉದ್ದೇಶ:–** ಆರೋಗ್ಯ ಮತ್ತು ದೀರ್ಘಾಯುಷ್ಯನ್ನು ಹೆಚ್ಚಿಸುವುದು.

**ಆಯುರ್ವೇದ ಎಂದರೆ:–** ರೋಗಿಯ ಅವಶ್ಯಕತೆಗಳಿಗೆ ಗಿಡಮೂಲಿಕೆ ಔಷಧಿ, ಬಾಹ್ಯ ಸಿದ್ಧತೆಗಳು, ಭೌತಿ ಚಿಕಿತ್ಸೆ ಮತ್ತು ಆಹಾರ ಬಳಕೆಯನ್ನು ಒಳಗೊಂಡಿರುವ ಚಿಕಿತ್ಸೆಯಾಗಿದೆ.

**ಆಯುರ್ವೇದದ ಚಿಕಿತ್ಸಾಂಶಗಳು:–** ಔಷಧಿಗಳು, ಸಿದ್ಧತೆಗಳು, ಭೌತಿಕ ಚಿಕಿತ್ಸೆ ಮತ್ತು ಆಹಾರದ ಬಳಕೆ ಆರೋಗ್ಯವನ್ನು ತಡೆಗಟ್ಟುವ ಚಿಕಿತ್ಸಾಕ್ರಮ. ಪ್ರಸ್ತುತ ಭಾರತದಲ್ಲಿ ಜನರು ಆಯುರ್ವೇದದ ಕಡೆಗೆ ಹೆಚ್ಚು ಗಮನವನ್ನು ನೀಡುತ್ತಿದ್ದಾರೆ.

*** ಯೋಗ:–**

ಇದರ ಬೆಳವಣಿಗೆಯು ಐದು ಸಾವಿರ ವರ್ಷಗಳ ಹಿಂದೆಯೇ ಗುರುತಿಸಬಹುದು ಆದರೆ, ಇದರ ಇತಿಹಾಸ ಅಸ್ಪಷ್ಟವಾಗಿದ್ದು ಇದನ್ನು ತಾಳೆಗರಿಗಳ ಮೇಲೆ ಬರೆದಿದ್ದಾರೆ. ಯೋಗದ ಸುಧೀರ್ಘ ಇತಿಹಾಸವನ್ನು ನಾವು ವಿವಿಧ ಹಂತಗಳಲ್ಲಿ ಕಾಣಬಹುದಾಗಿದೆ.

1.ಪೂರ್ವ ಶಾಸ್ತ್ರೀಯ ಯೋಗ 2.ಶಾಸ್ತ್ರೀಯ ಯೋಗ 3.ಶಾಸ್ತ್ರೀಯ ನಂತರ ಯೋಗ 4.ಆಧುನಿಕ ಯೋಗ ಈ ಹಂತಗಳ ಮುಖಾಂತರ ಯೋಗದ ಬೆಳವಣಿಗೆಯನ್ನು ನಾವು ಕಾಣಬಹುದಾಗಿದೆ. ಇತ್ತೀಚಿಗೆ ಬಹುತೇಕ ರೋಗಗಳಿಗೆ ಜನರು ಯೋಗವನ್ನು ಅನುಸರಿಸುತ್ತಿದ್ದಾರೆ. ಇದು ಮಾನವನ ಆರೋಗ್ಯಕ್ಕೆ ಹೆಚ್ಚು ಪೂರಕವಾಗಿದೆ.

**ಯೋಗ ಎಂದರೆ:–** ವ್ಯಾಯಾಮದ ಮೂಲಕ ಮಾನವನ ಆರೋಗ್ಯವನ್ನು ಕಾಪಾಡಿಕೊಳ್ಳುವುದು.

*** ಯುನಾನಿ:–**

ದಕ್ಷಿಣ ಏಷ್ಯಾ, ಮಧ್ಯ ಏಷ್ಯಾ ಸಂಸ್ಕೃತಿಯಲ್ಲಿ ಮುಸ್ಲಿಂ ಸಾಂಪ್ರದಾಯಿಕ ಔಷಧಿ ಯುನಾನಿಯಾಗಿದೆ. ಇದು ಈಜಿಪ್ಟ್ ನಾಗರಿಕತೆಯಿಂದ ಪ್ರಾರಂಭವಾಯಿತು. ಇದರ ಪಿತಾಮಹ 'ಹಿಪೋಕ್ರಿಟಿಕ್'. ಭಾರತಕ್ಕೆ ಈ ಔಷಧಿಯು 8ನೇ ಶತಮಾನದಲ್ಲಿ ಪ್ರವೇಶ ಮಾಡಿತು.

**ಯುನಾನಿ ಎಂದರೆ:–** ಮಾನವನ ದೇಹದ ಜೀರ್ಣಾಂಗ ಅಂಶಗಳು ಮತ್ತು ಸಾಮಿಪ್ಯ ಗುಣಗಳ ಆಧಾರದ ಮೇಲೆ ಚಿಕಿತ್ಸೆ ನೀಡುವುದಕ್ಕೆ ಯುನಾನಿ ಪದ್ಧತಿಯೆಂದು ಕರೆಯುತ್ತಾರೆ.

ಈ ಔಷಧಿಯಲ್ಲಿ ನಾವು ಎರಡು ರೀತಿಯ ಮೂಲಗಳನ್ನು ಕಾಣಬಹುದಾಗಿದೆ.

1. ಹಿಪೋರೇಟಿಕ್ ಸಿದ್ಧಾಂತದ ನಾಲ್ಕು ಹಾಸ್ಯಗಳು

   ರಕ್ತ, ಕಫ, ಹಳದಿ ಪಿತ್ತರಸ, ಕಪ್ಪು ಪಿತ್ತರಸ

2. ನಾಲ್ಕು ಸಾಮಿಪ್ಯ ಗುಣಗಳ ಪೈಥಾಗರಿಯನ್ ಸಿದ್ಧಾಂತ

   ಗಾಳಿ, ಬೆಂಕಿ, ನೀರು, ಭೂಮಿ

*** ಸಿದ್ಧಿ ಔಷಧಿ:–** ಹರಪ್ಪ ಮತ್ತು ಮೆಹೆಂಜೋದಾರ್ ನಾಗರಿಕತೆಯ ಸಮಯದಲ್ಲಿ ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಈ ಔಷಧಿಯ ಉತ್ಪತ್ತಿಯಾಯಿತು. 'ಅಗತ್ಯಮುನಿಗಳು'(ಅಗಸ್ಯಮುನಿಗಳು) ಇದರ ಪಿತಾಮಹ ಎಂದು ಕರೆಯಲಾಗುತ್ತದೆ.

ಈ ಔಷಧಿಯ ತ್ರಯ ಗುಣಗಳು; ಕಫ ಮತ್ತು ಪಿತ್ತ, ಈ ಔಷಧೀಯ ಪ್ರಕಾರ ಮಾನವನ ದೇಹದಲ್ಲಿ ಈ ತ್ರಯ ಗುಣಗಳು ಹೆಚ್ಚಾದರೆ, ರೋಗದ ಲಕ್ಷಣಗಳು ಕಂಡುಬರುತ್ತವೆ,

**ಚಿಕಿತ್ಸಾಕ್ರಮ:–**ಪ್ರಾಣಿಗಳನ್ನು ಬಳಸಿಕೊಂಡು ಸೂತ್ರಗಳನ್ನು ಮಾಡಿಕೊಂಡು ರೋಗಕ್ಕೆ ಚಿಕಿತ್ಸೆಯನ್ನು ನೀಡುತ್ತಾರೆ.

*** ಹೋಮಿಯೋಪತಿ:–**

ಹೋಮಿಯೋಪತಿ ಎಂದರೆ, ಒಂದೇ ರೀತಿಯಾದ ಕಾಯಿಲೆಯಿಂದ ಬಳಲುತ್ತಿರುವ ರೋಗ ಎಂಬರ್ಥವನ್ನು ನೀಡುತ್ತದೆ. ಇದನ್ನು ಮೊದಲು ಬಳಸಿದ್ದು ಜರ್ಮನಿಯ ರಾಸಾಯನಶಾಸ್ತ್ರಜ್ಞ 'ಪ್ಯಾಮಿಲಿಯಲ್ ಮ್ಯಾನ್' ಎಂಬುವವರು.

**ಔಷಧಿಯ ಮೂಲಗಳು–** ಸಸ್ಯಗಳು, ಪ್ರಾಣಿಗಳು, ಲೋಹಗಳು ಮತ್ತು ರಾಸಾಯನಿಕ ಅಂಶಗಳಾಗಿವೆ.

**ಸಮಸ್ಯೆಯ ಹೇಳಿಕೆ :–**

ಪ್ರಸ್ತುತ ದಿನಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಹಲವಾರು ಆವಿಷ್ಕಾರಗಳು ಮತ್ತು ಸಂಶೋಧನೆಗಳು ನಡೆಯುತ್ತಿದ್ದು, ಇಂದು ಮಾನವನ ಎಲ್ಲ ಆರೋಗ್ಯದ ಸಮಸ್ಯೆಗಳಿಗೆ ಬಹಳ ವೇಗವಾಗಿ ಸೂಕ್ತ ಚಿಕಿತ್ಸೆಗಳು ಅಂಗೈಯಲ್ಲಿ ದೊರೆಯುವಂತಾಗಿದೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳು ನಡಿಸಲಾಗುತ್ತಿದೆ. ಇದೇ ನಿಟ್ಟಿನಲ್ಲಿ ಕೋವಿಡ್–19 ಎಂಬ ಸಂಕ್ರಾಂತಿ ಕಾಯಿಲೆ 2019 ರಂದು ಜನರ ಆರೋಗ್ಯದ ಮೇಲೆ ಮತ್ತು ವೈದ್ಯಕೀಯ ವ್ಯವಸ್ಥೆ ಮೇಲೆ ಪ್ರಭಾವ ಬೀರುವುದರೊಂದಿಗೆ ವೈದ್ಯಕೀಯ ಕ್ಷೇತ್ರಕ್ಕೆ ಒಂದು ದೊಡ್ಡ ಸವಾಲಾಗಿ ಪರಿಗಣಿಸಿತು. ಭಾರತದಲ್ಲಿ 2021 ರಿಂದ ಕೋವಿಡ್–19 ಗೆ ಲಸಿಕೆ ದೊರೆಯುವಂತಾಯ್ತು. ಆದರೆ 2019 ರಿಂದ 2021 ರ ಈ ಎರಡು ವರ್ಷಗಳ ಅವಧಿಯಲ್ಲಿ ಜನರು ವೈರಸ್ಗೆ ಹೆದರಿ, ಮಾಟ ಮಂತ್ರ, ಹರಿಕೆ, ದೇವರಪೂಜೆ, ಹೋಮ ಮುಂತಾದವುಗಳ ಮೊರೆ ಹೋದರು. ಇವುಗಳಿಂದ ರೋಗ ನಿವಾರಣೆಯಾಗದ ಕಾರಣ, ಮತ್ತೊಮ್ಮೆ ಜಾನಪದ ಔಷಧಿ ಆದ ಸಾಂಪ್ರದಾಯಿಕ ಔಷಧಿ ಕಡೆಗೆ ಜನರು ಗಮನವನ್ನು ಹರಿಸಿದರು, ಅದರಲ್ಲೂ ಆಯುರ್ವೇದ ಮತ್ತು ಯೋಗದ ಬಳಕೆಯನ್ನು ಹೆಚ್ಚಾಗಿ ಮಾಡಿದರು. ಎರಡು ವರ್ಷಗಳ ಮಧ್ಯದಲ್ಲಿ ಸಾಂಪ್ರದಾಯಿಕ ಔಷಧಿಯು ಹೇಗೆ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿತು, ಆಯುರ್ವೇದ ಮತ್ತು ಯೋಗ ಈ ಸಮಯದಲ್ಲಿ ಹೇಗೆ ಮಹತ್ವ ಹೆಚ್ಚಿಸಿಕೊಂಡಿತ್ತು, ಜನರು ಯಾವ ಸಂಪ್ರದಾಯಿಕ ಔಷಧಿಗಳನ್ನು ಬಳಸಲಾಯಿತು ಎಂಬುದನ್ನು ತಿಳಿಯುವುದು ಈ ಅಧ್ಯಯನದ ಮಹತ್ವವಾಗಿದೆ.

**ಸೈದ್ಧಾಂತಿಕ ಭೂಮಿಕೆ:–**

"ಕೋವಿಡ್–19 ರ ಸಂದರ್ಭದಲ್ಲಿ ಸಾಂಪ್ರದಾಯಿಕ ಔಷಧಿಗಳ ಪ್ರಭಾವ ಕುರಿತು ಒಂದು ಸಮಾಜಶಾಸ್ತ್ರೀಯ ಅವಲೋಕನಕ್ಕೆ" ನಾನು ಮೈಕಲ್ ಫುಕಟ್ ರವರ ಡಿಸ್ಕೋರ್ಸ್ ಅಂಡ್ ಪವರ್ ಸಿದ್ಧಾಂತವನ್ನು ಹೋಲಿಕೆ ಮಾಡಿದ್ದೇನೆ. ಮೈಕಲ್ ಫುಕಟ್ ರವರು ಡಿಸ್ಕೋರ್ಸ್ ಅಂಡ್ ಪವರ್ ಟ್ರೂತ್ ನಲ್ಲಿ, ಯಾವುದೇ ಒಂದು ವಿಷಯ ಶಕ್ತಿಯನ್ನು ಪಡೆಯಬೇಕಾದರೆ ಅದನ್ನು ಜನರು ಹೆಚ್ಚಾಗಿ ಬೆಂಬಲಿಸಿ ಒಪ್ಪಬೇಕಾಗುತ್ತದೆ, ಆ ವಿಷಯವನ್ನು ನಂಬಿದಾಗ ಅದು ಶಕ್ತಿಯೊಂದಿಗೆ ಪ್ರಾಬಲ್ಯವನ್ನು ಪಡೆಯುತ್ತದೆ ಇದನ್ನು ಡಿಸ್ಕೋರ್ಸ್ ಮುಖಾಂತರ ಮಾಡಬಹುದು ಎಂದಿದ್ದಾರೆ. ಇದನ್ನೇ ನನ್ನ ವಿಷಯಕ್ಕೆ ಹೋಲಿಕೆ ಮಾಡಿದಾಗ 2019 ರಿಂದ 2021 ರವರೆಗೆ ಆಯುರ್ವೇದ ಯಾವ ರೀತಿಯಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು ಎಂದರೆ, ಆಯುಷ್ ಒಲಊಈಫ ಮತ್ತು ಅಖಿಬ ಸರ್ಕಾರ ಆಯುರ್ವೇದ ಡಿಸ್ಕೋರ್ಸ್ ಅನ್ನು ಮಂಡಿಸಿತು, ಅಂದರೆ ಆಯುರ್ವೇದ ಕೋವಿಡ್ ನ ವಿರುದ್ಧವಾಗಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ರೋಗ ಬರದಂತೆ ತಡೆಗಟ್ಟುವುದರೊಂದಿಗೆ ಮತ್ತು ರೋಗವು ಬೇಗ ವಾಸಿಯಾಗುವಂತೆ ಶಕ್ತಿಯನ್ನು ಹೊಂದಿದೆ ಎಂದು, ಸಾರ್ವಜನಿಕವಾಗಿ ಸಾಮಾಜಿಕ ಜಾಲತಾಣಗಳಲ್ಲಿ, ಟಿವಿ, ಜಾಹೀರಾತುಗಳ ಮುಖಾಂತರ ವಾದವನ್ನು ಮಂಡಿಸಿದರು. ಇದನ್ನು ಮನಗೊಂಡ ಜನರು ಆಯುರ್ವೇದದ ಬಳಕೆಯಿಂದ ಕೋವಿಡ್ ಅನ್ನು ತಡೆಗಟ್ಟಬಹುದೆಂದು ನಂಬಲು ಮುಂದಾದರು, ಜೊತೆಗೆ ಇದು ಸಾಂಪ್ರದಾಯಿಕ ಔಷಧಿಯಾಗಿದ್ದು ಗಿಡಮೂಲಿಕೆಗಳಿಂದ ಕೂಡಿದ್ದು ಯಾವುದೇ ಪರ್ಯಾಯ ರೋಗಗಳು ಬರುತ್ತಿರಲಿಲ್ಲ ಈ ಕಾರಣಕ್ಕಾಗಿ ಜನರು ಇದನ್ನು ಹೆಚ್ಚಾಗಿ ಬಳಕೆ ಮಾಡಲು ಮುಂದಾದರು ಆ ಸಂದರ್ಭದಲ್ಲಿ ಆಯುರ್ವೇದ ಹೆಚ್ಚು ಶಕ್ತಿದಾಯಕ ಪ್ರಾಬಲ್ಯವನ್ನು ಪಡೆದುಕೊಂಡಿತ್ತು.

**ಕೋವಿಡ್–19 ರ ಸಂದರ್ಭದಲ್ಲಿ ಸಾಂಪ್ರದಾಯಿಕ ಔಷಧಿಗಳ ಪ್ರಭಾವ:–**

ಕೊರೊನ ವೈರಸ್ಗಳು ಎಲೆಕ್ಟ್ರಾನ್ ಮೈಕ್ರೋಸ್ಕೋಪಿ ಅಡಿಯಲ್ಲಿ ಕಿರೀಟ ದಂತಹ ಆಕಾರದೊಂದಿಗೆ, ಸರಾಸರಿ 60 ಟಿಟ ಮತ್ತು 140 ಟಿಟ ವ್ಯಾಸವನ್ನು ಹೊಂದಿರುವ ಏಕ ಎಳೆಯ ಖಓಂ ಧನಾತ್ಮಕ ಸಂವೇದನೆಯ ವೈರಸ್ಗಳಾಗಿವೆ, ಕೋವಿಡ್–19 ಇತರೆ ದೇಶಗಳಲ್ಲಿ ಪತ್ತೆಯಾಗುವ ಮೊದಲು, ಚೀನಾದ ಹುಬೈ ಪ್ರಾಂತ್ಯದ "ವುಹಾನ್ "ನಲ್ಲಿ ಮೊದಲ ಬಾರಿಗೆ ಪತ್ತೆಯಾಗಿ ಡಿಸೆಂಬರ್ 2019 ರಂದು ಪ್ರಕರಣವು ವರದಿಯಾಯಿತು. ನಂತರ ಐದು ಜನ ರೋಗಿಗಳು ತೀವ್ರ ಉಸಿರಾಟದ ಲಕ್ಷಣದೊಂದಿಗೆ ಆಸ್ಪತ್ರೆಯನ್ನು ಸೇರಿದರು, ಈ ರೋಗಿಗಳಲ್ಲಿ ಒಬ್ಬರು ಸಾವನ್ನಪ್ಪಿದ್ದರು ಇದನ್ನು ಪರಿಗಣಿಸಿದ 'ವಿಶ್ವ ಆರೋಗ್ಯ ಸಂಸ್ಥೆಯು' ಸಾರ್ವಜನಿಕ ಕಾಳಜಿಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನವರಿ.30.2020 ರಂದು 'ಆರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಿತು'.

**ಈ ರೋಗದ ಪ್ರಮುಖ ಗುಣಲಕ್ಷಣಗಳು–** ತೀವ್ರ ಉಸಿರಾಟದ ತೊಂದರೆ, ಜ್ವರ, ನೆಗಡಿ, ಕೆಮ್ಮು, ಗಂಟಲು ನೋವು, ಮೈಕೈ ನೋವು.

2019ರಲ್ಲಿ ಪ್ರಾರಂಭವಾದ ಕೋವಿಡ್–19 ಗೆ ಭಾರತದಲ್ಲಿ ನಾಲ್ಕು ಕೋಟಿ ಜನರು ತುತ್ತಾಗಿದ್ದು, 5.29 ಲಕ್ಷ ಜನರು ಸಾವಿಗೆ ತುತ್ತಾದರು. ಪ್ರಪಂಚದಲ್ಲಿ ಸುಮಾರು 6.56 ಕೋಟಿ ಜನರು ಮರಣವನ್ನಪ್ಪಿದರು ಎಂದು ಡಬ್ಲ್ಯೂ.ಟಿ.ಓ ವರದಿಯನ್ನು ನೀಡಿದೆ. ಈ ವೈರಸ್ಗೆ 2021 ರಲ್ಲಿ ಲಸಿಕೆಯನ್ನು ಕಂಡುಹಿಡಿಯಲಾಯಿತು ಆದರೆ 2019 ರಿಂದ 2021 ರವರೆಗೆ ಅಂದರೆ ಎರಡು ವರ್ಷಗಳ ಕಾಲ ಈ ವೈರಸ್ ಗೆ ಲಸಿಕೆ ಇಲ್ಲದೆ ಜನರು ಭಯಭೀತರಾದರು. ಈ ಸಮಯದಲ್ಲಿ ಪ್ರಪಂಚವು ಚಿಂತಾ ಜನಕವಾಗಿ ಸಂಶೋಧನ ಕಡೆ ಗಮನಹರಿಸಿ, ಅನೇಕ ಅಧ್ಯಯನಗಳು ನಡೆಸಿದರು. ಈ ರೋಗವನ್ನು ತಡೆಗಟ್ಟಲು ಯಾವುದೇ ಲಸಿಕೆಯು ಸಿಗದ ಕಾರಣ, ಭಾರತ, ಇರಾನ್ ಮತ್ತು ಚೀನಾ ದೇಶಗಳು ಸಾಂಪ್ರದಾಯಿಕ ಔಷಧಿಗಳನ್ನು ಬಳಿಸಲು ಸೂಚಿಸಿದರು. ಆಗ ಹಲವಾರು ಗಿಡಮೂಲಿಕೆಗಳ ಸಾರಗಳು ಅವುಗಳ ಉತ್ಪನ್ನಗಳ ಸಂಭಾವ್ಯವನ್ನು ಆಂಟಿವೈರಲ್ ಬಳಕೆ ಮಾಡಲು ಯಾವುದೇ ಏಜೆಂಟ್ ಮತ್ತು ಅಧ್ಯಯನಗಳು ಇರಲಿಲ್ಲ ಆದರೆ ಈ ಸಮಯದಲ್ಲಿ ಕೋವಿಡ್–19ನ್ನು ತಡೆಗಟ್ಟಲು ಮತ್ತು ಹೆದರಿಸಲು ಗಿಡಮೂಲಿಕೆಗಳ ಸಾರಗಳ ಸೂತ್ರಗಳು ಮುಖ್ಯವಾದ್ದವು. ಈ ಸಮಯದಲ್ಲಿ ಬಳಕೆ ಮಾಡಿದ ಕೆಲವು ಸಂಪ್ರದಾಯಿಕ ಔಷಧಿಗಳು ಈ ಕೆಳಕಂಡಂತಿವೆ.

*** ಸಾಂಪ್ರದಾಯಿಕ ಔಷಧಿಗಳು:–**

*** CTM – ಚೀನಿ ಸಂಪ್ರದಾಯಿಕ ಔಷಧಿ.**

ಇದು ಕೋವಿಡ್–19ರ ಸಂದರ್ಭದಲ್ಲಿ ರೋಗಿಗಳ ರೋಗಲಕ್ಷಣಗಳ ವಿರುದ್ಧ ಗಿಡಮೂಲಿಕೆಗಳ ಸೂತ್ರವನ್ನು ಸೂಚಿಸಿತು. ಜನವರಿ 24 2019 ರಂದು ಕೋವಿಡ್–19 ರಿಂದ ಬಳಲುತ್ತಿದ್ದ ವ್ಯಕ್ತಿಯು, ಸಿ.ಟಿ.ಎಂ ಚಿಕಿತ್ಸೆ ನಂತರ ಆಸ್ಪತ್ರೆಯಿಂದ ಚೇತರಿಸಿಕೊಂಡು ಬಂದ ಎಂದು ಚೀನಾ ರಾಷ್ಟ್ರೀಯ ಆರೋಗ್ಯ ಕಚೇರಿ ವರದಿ ಮಾಡಿದೆ, ಇದು ಉಸಿರಾಟದ ಕಾಯಿಲೆಯ ವಿರುದ್ಧ ಚಿಕಿತ್ಸೆಯನ್ನು ನೀಡುತ್ತಿತ್ತು.

*** ಇಂತಫೆರನ್ ಆಲ್ಫಾ** (IFNA) – ದೇಹದಲ್ಲಿ ಪ್ರೋಟೀನ್ಗಳನ್ನು ಹೆಚ್ಚಿಸಲು ಹ್ಯೂಮನ್ ಇಮ್ಯುನೊ ಡಿಫಿಷಿಯನ್ಸಿ ಬಳಸಲಾಯಿತು.

*** ಆರ್ಬಿಡಾಲ್** ಎಂಬುದು ರಷ್ಯಾ ಮತ್ತು ಚೀನಾದಲ್ಲಿ ಬಳಸಿದ ಔಷಧಿಯಾಗಿದೆ ಇದು ರೋಗಿಗಳನ್ನು ಅಸ್ತಾಮ್ದಿಂದ ಚೇತರಿಸಿಕೊಳ್ಳಲು ನಡೆಸಿದ ಔಷಧಿಯಾಗಿದೆ, ಇದರ ಬಗ್ಗೆಯೂ ಸಹ ಚೀನಾ ಸರ್ಕಾರ ವರದಿಯನ್ನು ನೀಡಿದೆ

*** ಕೆಲವಾಲಿಯು ಎನ್ಪಿಸಿ ಫಾರ್ ಮಿಸ್–** ವೈರಸ್ಸಿನ ವಿರುದ್ಧ ಹೋರಾಡುವ ಶಕ್ತಿಯನ್ನು ಹೆಚ್ಚಿಸುತ್ತದೆ

*Cibotium baromeutz and dioscorea batatas– ಇದು ವೈರಸ್ಸಿನ ವಿರುದ್ಧ ಅಂತರ್ಜೀವಕೋಶದಲ್ಲಿನ ಕ್ಯಾಲ್ಸಿಯಂ ಮಟ್ಟವನ್ನು ಹೆಚ್ಚಿಸುತ್ತದೆ.

* **MRC–5** ಇದು ಜೀವಕೋಶದ ಮರಣವನ್ನು ಕಡಿಮೆ ಮಾಡುತ್ತದೆ.

**ಗಿಡಮೂಲಿಕೆಯ ಸೂತ್ರದ ಹೆಸರುಗಳು:–**

- **ಮಾ ಕ್ಸಿಂಗ್ ಶಿಗನ್ ಡಿಕಾಕ್ಷನ್**
- **ಡಾ ಯುವಾನ್ ಯಿನ್ ಕಷಾಯ**
- **ಕ್ವಿಂನ್ ಫೀ ಪೈಡು ಕಷಾಯ**
- **ಯು ಪಿಂಗ್ ಪೆಂಗ್ ಸ್ಯಾನ್**
- **ಪೈನೀಸ್ ಹರ್ಬಲ್ ಮೆಡಿಸಿನ್**
- **ಲಿಯಾನ್ಹುವ ಕ್ವಿಂಗ್ವೆನ್**
- **ಸಾಂಗ್ ಜುಯನ್**
- **ಯುವೆಂಗ್ ಫೆಂಗ್ ಸ್ಯಾನ್ ಸಾರ**

ಈ ಗಿಡಮೂಲಿಕೆಗಳ ಸೂತ್ರದ ಸಾರವು ಕೋವಿಡ್–19 ಸಂದರ್ಭದಲ್ಲಿ ಚಿಕಿತ್ಸೆಯ ಔಷಧಿಯಾಗಿ ಹೆಚ್ಚು ಪರಿಣಾಮಕಾರಿಯಾಗಿ ಪ್ರಭಾವವನ್ನು ಬೀರಿರುವುದು ಚೀನಾ ಸರ್ಕಾರವು ತನ್ನ ವರದಿಯಲ್ಲಿ ನೀಡಿದೆ.

**ಕೋವಿಡ್–19 ಸಂದರ್ಭದಲ್ಲಿ ಭಾರತದಲ್ಲಿ ಆಯುರ್ವೇದಿಕ್ ಮತ್ತು ಯೋಗದ ಔಷಧೀಯ ಬಳಕೆಯು ಹೆಚ್ಚಾಗುತ್ತಿರುವಿಕೆ:–**

ಮಾನವನ ಇತಿಹಾಸದ ಅತ್ಯಂತ ಹಳೆಯ ಚಿಕಿತ್ಸೆಗಳಲ್ಲಿ ಒಂದಾದ ಭಾರತದ ಸಾಂಪ್ರದಾಯಿಕ ಔಷಧಿ ಮತ್ತು ಆಯುರ್ವೇದ, ಸಿದ್ಧಿ, ಯುನಾನಿ, ಯೋಗ, ಪ್ರಕೃತಿ ಚಿಕಿತ್ಸೆ ಮತ್ತು ಹೋಮಿಯೋಪತಿಗಳು ವಿವಿಧ ರೋಗಗಳ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಭಾರತೀಯ ಸಾಂಪ್ರದಾಯಿಕ ಔಷಧಿಯಲ್ಲಿ 2500ಕ್ಕೂ ಹೆಚ್ಚು ಔಷಧೀಯ ಸಸ್ಯಾಧಾರಿತ ಸೂತ್ರಗಳನ್ನು ಬಳಸಲಾಗಿದೆ. ಭಾರತದ ಬಹಳಷ್ಟು ಸಸ್ಯಗಳನ್ನು ಆಂಟಿವೈರಲ್ ಮತ್ತು ಆಂಟಿ ಆಕ್ಸಿಡೆಂಟ್ಗಳಾಗಿ ಬಳಸುತ್ತಿದ್ದಾರೆ. ಉದಾಹರಣೆಗೆ:– ಗೈಸಿರಿಝುಗಾ ಗ್ಲಾಬ್ರಾ ಮತ್ತು ಆಲಿಯಮ್ ಸ್ಯಾಟಿವಮ್, Clerodendrum inerme Gortn.

ಭಾರತದಲ್ಲಿ ಜಿಯಾದ್ ಮತ್ತು ಹೈದರಿ ಮತ್ತು 20 ಗಿಡ ಮೂಲಿಕೆಗಳ ಸಾರವನ್ನು ಅಧ್ಯಯನ ಮಾಡಿದ್ದಾರೆ. ಭಾರತದಲ್ಲಿ ಸಸ್ಯಗಳ ಸೂತ್ರಗಳ ಸಾರಕ್ಕಿಂತಲೂ, ಆಯುರ್ವೇದ ಮತ್ತು ಯೋಗ ಹೆಚ್ಚು

ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಕೋವಿಡ್–19 ರಿಂದ ಜನರು ಬೇಗ ಚೇತರಿಸಿಕೊಳ್ಳಲು "ಭಾರತ ಸರ್ಕಾರವು ಆಯುರ್ವೇದ ಮತ್ತು ಯೋಗ ಪ್ರೋಟೋಕಾಲನ್ನು"(MINISTRY OF AYUSH) ಜಾರಿಗೆ ತಂದರು. ಇದರ ಬಹುತೇಕ ಚಿಕಿತ್ಸಾಕ್ರಮಗಳು ಕೋವಿಡ್ ಅನ್ನು ತಡೆಗಟ್ಟುವಲ್ಲಿ ಯಶಸ್ವಿಯಾಯಿತು.

**ಕೋವಿಡ್–19 ಗೆ ಸಂಬಂಧಿಸಿದಂತೆ ಆಯುರ್ವೇದದ ಕೆಲವು ಔಷಧಿಗಳು ಈ ಮುಂದಿನಂತಿವೆ**

* Ayush 64- Guduchighanavsti
* Ayush 64 + Guduchi + pippali
* Ashwagandha + chyawanprash
* Rasayanachura

ಈ ರೀತಿಯ ಔಷಧಿಗಳ ಚಿಕಿತ್ಸೆಯನ್ನು ನೀಡುವುದರ ಮೂಲಕ ಕೋವಿಡ್–19 ನ್ನು ತಡೆಗಟ್ಟಿರುವುದು ಬಗ್ಗೆ MoHFW ವರದಿಯನ್ನು ನೀಡಿದೆ.

* **Yoga protocol for covide-19**

ಕೋವಿಡ್–19ನ್ನು ತಡೆಗಟ್ಟುವ ಸಲುವಾಗಿ ಈ ಪ್ರೋಟೋಕಾಲ್ ನ ಮುಖಾಂತರ ಜನರ ಒತ್ತಡ ಕಡಿಮೆ ಮಾಡಿ ಮತ್ತು ಯುಮಿನಿಟಿ (Immunity)ಯನ್ನು ಹೆಚ್ಚು ಮಾಡಲು ಸರ್ಕಾರವು ಇದನ್ನು ಜಾರಿಗೆ ತಂದಿದೆ.

**ಕೋವಿಡ್–19ಕ್ಕೆ ಸಂಬಂಧಿಸಿದ ಕೆಲವು ಯೋಗಾಸನಗಳು**

* Breathing Practice- vaataneti
* Loosening practice
* Prone typing Asana
* Kriya
* Simhasana

ಇನ್ನು ಮುಂತಾದ ಯೋಗಾಸನಗಳ ಮುಖಾಂತರ ಕೋವಿಡ್ ವಿರುದ್ಧ ಹೋರಾಡುವ ಕ್ರಮಗಳನ್ನು ಯೋಗ ಪದ್ಧತಿಯು ಅನುಸರಿಸಿತು. ಕೋವಿಡ್ ಸಂದರ್ಭದಲ್ಲಿ ಅತಿ ಹೆಚ್ಚು ಜನರು ಇದನ್ನು ಬಳಕೆ ಮಾಡಿಕೊಂಡರು. ಪ್ರಸ್ತುತ ದಿನಗಳಲ್ಲಿಯೂ ಸಹ ಜನರು ಯಥೇಚ್ಛವಾಗಿ ಬಳಸುತ್ತಿರುವುದನ್ನು ಕಾಣಬಹುದಾಗಿದೆ. ನನಗೆ ದೊರತ ಮಾಹಿತಿ ಆಧಾರದ ಮೇಲೆ ಜನರು ಸಸ್ಯಗಳ ಸಾರಕ್ಕಿಂತಲೂ ಹೆಚ್ಚಾಗಿ ಯೋಗ ಮತ್ತು ಆಯುರ್ವೇದದ ಕಡೆಗೆ ಒಲವನ್ನು ತೋರಿದ್ದಾರೆ. ಇವುಗಳ ಬಳಕೆಯಿಂದ ಕೋವಿಡ್–19 ನಿಂದ ಪಾರಾಗಿದ್ದಾರೆ, ಕೆಲವರು ಯೋಗವನ್ನು ಮಾಡಿ ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡಿರುವುದು ಕಂಡು ಬಂದಿದೆ.

**ಸಾಹಿತ್ಯ ಅವಲೋಕನ:–**

**ಡಾ. ಮಾಗಡಿ ಗುರುದೇವ: ಕರ್ನಾಟಕದ ಔಷಧೀಯ ಸಸ್ಯಗಳು, 1997**

ಗ್ರಾಮೀಣ ಪ್ರದೇಶದಲ್ಲಿ ಜನರ ಅನುಸರಿಸುತ್ತಿದ್ದ ಔಷದಿಯ ವೈವಿಧ್ಯತೆಯ ಕ್ರಮಗಳು, ಗ್ರಾಮೀಣ ಔಷಧೀಯ ಸಸ್ಯಗಳ ಉಪಯೋಗಗಳ ಬಗ್ಗೆ ಮಾಹಿತಿ ಇದೆ. ಕೃಷಿಯನ್ನು ಮಾಡುವಾಗ ಕೃಷಿ ಕೀಟ ನಿಯಂತ್ರಣ ಔಷಧಿಗಳ ಬಗ್ಗೆ ಮತ್ತು ಕೆಲವು ಔಷಧಿ ಸಸ್ಯಗಳಾದ ಬೇವಿನ ಸರ್ವ, ಅಶ್ವಗಂಧ, ಒಂದಲಗ, ಏಕೆ, ಉತ್ತರಾಣಿ, ಮದುರಂಗ ಮುಂತಾದ ಔಷಧೀಯ ಸಸ್ಯಗಳ ಪರಿಚಯ ಮತ್ತು ಅವುಗಳ ಮಹತ್ವವನ್ನು ಗುರುತಿಸುವಲ್ಲಿ ಈ ಲೇಖನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಮಾಹಿತಿಯಿಂದ ಕೆಲವು ರೋಗಗಳಿಗೆ ಯಾವ ರೀತಿಯಾದ ಔಷಧಿಯನ್ನು ಬಳಸಬಹುದು ಮತ್ತು ಕೋವಿಡ್ ಸಮಯದಲ್ಲಿ ಜನರು ಯಾವ ರೀತಿಯಾದ ಔಷಧಿಯನ್ನು ಬಳಸಿದರೆ ಹೆಚ್ಚು ಪರಿಣಾಮಕಾರಿಯಾಗಿ ಬೀರುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಕೋವಿಡ್ ಸಮಯದಲ್ಲಿ ಜನರು ಗ್ರಾಮೀಣ ಪ್ರದೇಶದಲ್ಲಿ ಮನೆಮದ್ದು ಹೆಚ್ಚಾಗಿ ಬಳಸುತ್ತಿದ್ದನ್ನು ನಾವು ಕಾಣಬಹುದು.

**ಅಮೀರ್ ಮೀರ್ಜೈ: ಕೊರೊನ ವೈರಸ್ ಕಾಯಿಲೆ 2019ರ ಚಿಕಿತ್ಸೆಗಾಗಿ ಸಾಂಪ್ರದಾಯಿಕ ಔಷಧಿಗಳ ಆಯ್ಕೆ: ಆಗಸ್ಟ್ 2020.**

ಇದರಲ್ಲಿ ಲೇಖಕರು 2019ರಲ್ಲಿ ಕೋವಿಡ್ ಬಂದಾಗ ಸಮಾಜದಲ್ಲಿ ಯಾವ ರೀತಿಯ ಸ್ಥಿತಿಯಿತ್ತು ಮತ್ತು ಈ ಸಂದರ್ಭದಲ್ಲಿ ಜನರು ಈ ವೈರಸ್ ನ ವಿರುದ್ಧವಾಗಿ ಯಾವೆಲ್ಲ ಕ್ರಮಗಳನ್ನು ಮತ್ತು ಚಿಕಿತ್ಸೆಗಳನ್ನು ಅನುಸರಿಸಿದರು ಎಂಬುದನ್ನು ಆಧಾರವಾಗಿಟ್ಟುಕೊಂಡು ಆ ಸಂದರ್ಭದಲ್ಲಿ ಸಾಂಪ್ರದಾಯಿಕ ಗಿಡಮೂಲಿಕೆಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡವು ಭಾರತ, ಚೀನಾ ಮತ್ತು ಇರಾನ್ ದೇಶಗಳಲ್ಲಿ ಎಂದು ಪ್ರತಿಪಾದಿಸಿದ್ದಾರೆ. ಇವರು ನೀಡಿರುವ ಮಾಹಿತಿಯು ಹೆಚ್ಚು ಸತ್ಯವಾಗಿದ್ದರೂ ಸಹ 2019ರ ಪ್ರಾರಂಭದಲ್ಲಿ ಅದರಲ್ಲೂ ಭಾರತ ದೇಶದಲ್ಲಿ ಜನರು ಗಿಡಮೂಲಿಕೆ ಸಸ್ಯಗಳ ಔಷದಿಗಿಂತಲೂ ಹೆಚ್ಚಾಗಿ ಆಯುರ್ವೇದ, ಯೋಗ ಮತ್ತು ಮನೆ ಔಷಧಿಯನ್ನು ಬಳಕೆ ಮಾಡಲು ಮುಂದಾಗಿದ್ದಾರೆ. ಭಾರತ ಸರ್ಕಾರವು ಸಹ ಆಯುರ್ವೇದ, ಯೋಗ ಬಳಕೆಗೆ ಆದ್ಯತೆಯನ್ನು ನೀಡಿರುವುದು ಕೆಲವು ಪ್ರೊಟೊಕಲ್ಗಳ ಮುಖಾಂತರ ನಾವು ತಿಳಿಯಬಹುದಾಗಿದೆ.

**ಅಧ್ಯಯನದ ವಿಧಾನ**

"ಕೋವಿಡ್–19 ಸಂದರ್ಭದಲ್ಲಿ ಸಾಂಪ್ರದಾಯಿಕ ಔಷಧಿಗಳ ಪ್ರಭಾವ ಕುರಿತು ಒಂದು ಸಮಾಜಶಾಸ್ತ್ರೀಯ ಅವಲೋಕನ"ಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಅಧ್ಯಯನದ ದತ್ತಾಂಶ ಸಂಗ್ರಹಣೆಗಾಗಿ, ನಾನು ಮಾಧ್ಯಮಿಕ ಮಾಹಿತಿ ವಿಧಾನದ ಮೂಲಕ ಮಾಹಿತಿಯನ್ನು ಸಂಗ್ರಹಣೆ ಮಾಡಿದ್ದೇನೆ. ನನಗೆ ಲಭ್ಯವಾದ ಕೆಲವು ಮಾಧ್ಯಮಿಕ ಮಾಹಿತಿ ಮೂಲಗಳೆಂದರೆ: ಅಖಿಜ – ಚೀನಿ ಸಂಪ್ರದಾಯಿಕ ಔಷಧಿ,

ಇರಾನ್ ಸಂಪ್ರದಾಯಿಕ ಔಷಧಿ, ಅಮೀರ್ ಮೀರ್ಜೈ ರವರು ಪ್ರಕಟಿಸಿರುವ, ಸಾಂಪ್ರದಾಯಿಕ ಔಷಧಿಗಳು ಆಯ್ಕೆ ಎಂಬ ಲೇಖನದಲ್ಲಿ ಚೀನ ಸರ್ಕಾರ ಇದರ ಬಗ್ಗೆ ವರದಿಯನ್ನು ನೀಡಿರುವುದನ್ನು ಉಲ್ಲೇಖಿಸಿದ್ದಾರೆ, ಗ್ರಂಥಗಳು, ಕೈಪಿಡಿಗಳು, ನಾಟಿ ವೈದ್ಯಕ್ಕೆ ಸಂಬಂಧಿಸಿದ ಲೇಖನಗಳು, ಸಂಶೋಧನಾ ಲೇಖನಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹೊರಡಿಸಿರುವ ಆಯುಷ್ ಪ್ರೋಟೋಕಾಲ್ ಮತ್ತು ಯೋಗ ಪ್ರೋಟೋಕಾಲ್ ಗಳ ಮುಖಾಂತರ ಮಾಹಿತಿಯನ್ನು ಸಂಗ್ರಹಣೆ ಮಾಡಿದ್ದೇನೆ.

**ಉಪಸಂಹಾರ ಮತ್ತು ಸಲಹೆಗಳು**

ಒಟ್ಟಾರೆಯಾಗಿ ಹೇಳುವುದಾದರೆ ಸಾಂಪ್ರದಾಯಿಕ ಔಷಧಿ ಎಂಬುದು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಆರೋಗ್ಯದ ಸಮಸ್ಯೆಗಳು ಮಾನವನು ಈ ಭೂಮಿಗೆ ಬಂದಾಗಿನಿಂದಲೂ ಕಾಣಬಹುದಾಗಿದೆ. ಕಾಲದಿಂದ ಕಾಲಕ್ಕೆ ಆರೋಗ್ಯದ ಸಮಸ್ಯೆಗಳಿಗೆ ಮಾನವನು ಒಂದಲ್ಲ ಒಂದು ರೀತಿಯಾಗಿ ಚಿಕಿತ್ಸಾಕ್ರಮಗಳನ್ನು ಅನುಸರಿಸುತ್ತಾ ಬರುತ್ತಿದ್ದಾನೆ. ವಿಜ್ಞಾನ ತಂತ್ರಜ್ಞಾನ ಎಷ್ಟೇ ಬೆಳೆದರೂ ಸಹ ಕೆಲವೊಂದು ರೋಗಗಳಿಗೆ ನಾವು 21ನೇ ಶತಮಾನದಲ್ಲಿ ಇದ್ದರೂ ಲಸಿಕೆ ದೊರೆಯದಂತಾಗಿದೆ, ಅಂತಹ ರೋಗಗಳಿಗೆ ಔಷಧಿ ದೊರೆಯುತ್ತಿರುವುದು ಸಾಂಪ್ರದಾಯಿಕ ಔಷಧಿಯಲ್ಲಿ. ಹೀಗೆ ನೋಡಿದರೆ ಕೋವಿಡ್–19 ರ ವಿರುದ್ಧ ಮನೆಮದ್ದುಗಳಾದ ಜೀರಿಗೆ, ಮೆಣಸು, ಕಷಾಯ, ಅರಿಶಿನ ಮತ್ತು ಶುಂಠಿ ಮುಂತಾದವುಗಳನ್ನು ಬಳಕೆ ಮಾಡುವುದರಿಂದ ಕೋವಿಡ್–19ರ ಲಕ್ಷಣಗಳನ್ನು ಬರದಂತೆ ಬಹುತೇಕ ಜನರು ಈ ಕ್ರಮಗಳನ್ನು ಅನುಸರಿಸಿದ್ದು ನಾವೆಲ್ಲರೂ ಸಹ ಕಂಡಿದ್ದೇವೆ. ಮುಂದಿನ ದಿನಗಳಲ್ಲಿಯೂ ಸಹ ಆರೋಗ್ಯದ ಸಮಸ್ಯೆಗಳು ಕಂಡು ಬರಬಹುದು, ಯಾವ ರೀತಿಯಾಗಿ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಈ ಸಮಸ್ಯೆಗಳಿಗೆ ನಮ್ಮ ಸಾಂಪ್ರದಾಯಿಕ ಔಷಧಿಯಿಂದ ಚಿಕಿತ್ಸೆ ದೊರೆಯಬಹುದಾಗಿದೆ. ಈ ಕಾರಣಕ್ಕಾಗಿ ಜನರು ಸಾಂಪ್ರದಾಯಿಕ ಔಷಧಿಯ ಬಗ್ಗೆ ತಿಳಿಯುವುದು ಮುಖ್ಯವಾಗಿದೆ ಎಂದು ನನ್ನ ಅಧ್ಯಯನ ಮೂಲಕ ತಿಳಿಸುತ್ತೇನೆ. ಸಾಂಪ್ರದಾಯಿಕ ಔಷಧಿಯನ್ನು ಇನ್ನು ಹೆಚ್ಚು ಪ್ರಸಿದ್ಧಿ ಗೊಳಿಸಲು ಕೆಲವೊಂದು ಸಲಹೆಗಳು ಈ ಮುಂದಿನಂತಿವೆ.

- ಮುಂದಿನ ತಲೆಮಾರಿನ ಜನರಿಗೆ ಸಾಂಪ್ರದಾಯಿಕ ಔಷಧಿ ಬಗ್ಗೆ ಮಾಹಿತಿಯನ್ನು ಒದಗಿಸುವುದು.
- ಸಾಂಪ್ರದಾಯಿಕ ಔಷಧಿಯ ಚಿಕಿತ್ಸಾಕೇಂದ್ರಗಳನ್ನು ಸ್ಥಾಪಿಸುವುದು.
- ಗ್ರಾಮೀಣ ಔಷಧಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಜನರಿಗೆ ಲಭ್ಯವಾಗುವಂತೆ ಮಾಡುವುದು.
- ಸಾಂಪ್ರದಾಯಿಕ ಔಷಧಿಗಳಿಗೆ ಸರ್ಕಾರ ಕೆಲವು ಸೌಲಭ್ಯಗಳನ್ನು ನೀಡಿ ಪ್ರೋತ್ಸಾಹಿಸುವುದು.

## ಆಧಾರ ಗ್ರಂಥಗಳು

1. ಮಾಗಡಿ ಗುರುದೇವ "ಕರ್ನಾಟಕ ಔಷಧಿ ಸಸ್ಯಗಳು" 1997
2. ವಸುಂದರ "ಔಷಧಿ ಮತ್ತು ಸುಗಂಧ ಸಸ್ಯಗಳ ಕೈಪಿಡಿ" 2000
3. ಇವಾಗ್ ಪಿಚ್ಚರ್ "ಮಾಂತ್ರಿಕ ವಿದ್ಯೆ ಮತ್ತು ಸ್ಥಳೀಯರ ಅಭಿಪ್ರಾಯ" 2009
4. ಪಂಡಿತ್ ತಾರಾನಾಥ್ "ಸುಲಭ ಚಿಕಿತ್ಸೆ" 2018
5. ಅಮೀರ್ ಮಿರ್ಜೈ "ಕಾರೋನ ವೈರಸ್ ಕಾಯಿಲೆ 2019 ಚಿಕಿತ್ಸೆಗಾಗಿ ಸಾಂಪ್ರದಾಯಿಕ ಔಷಧಿಗಳ ಆಯ್ಕೆ ಆಗಸ್ಟ್" 2020
6. ಇಂಟರ್ನೆಟ್.